ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 26.09.2023

**ಮುಂದುವರೆದ ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ**

1) ಆರೋಪಿತನು ನನ್ನ ಕಡೆಯಿಂದ 10,000/- ಸಾವಿರ, 20,000/- ರೂ.ಗಳನ್ನು ಪಡೆದುಕೊಂಡು ಮರಳಿಕೊಡುತ್ತಿದ್ದನ್ನು ಆದರೆ ಯಾವ ದಿನಾಂಕ ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ಆರೋಪಿತನು ಸುಮಾರು 4 ರಿಂದ 5 ವರ್ಷದಿಂದ ಹಣ ಪಡೆದುಕೊಂಡು ಮರಳಿ ಕೊಡುತ್ತಿದ್ದನು. ಆರೋಪಿತನು ನಮ್ಮ ಮನೆಯಲ್ಲಿ ಹಣ ಪಡೆದುಕೊಂಡಿದ್ದನು. ಆರೋಪಿತನು 4 ವರ್ಷದ ಹಿಂದೆ ಎಲ್ಲಿ ನೌಕರಿ ಮಾಡುತ್ತಿದ್ದ ನಾನು ಕೇಳಿಲ್ಲ. ಆರೋಪಿತನು ಮೊದಲು ಯಾರ ಸಮಕ್ಷಮ ಸಹ ಹಣ ಪಡೆಯುತ್ತಿರಲಿಲ್ಲ. ಆದರೆ ನನ್ನ ಕಡೆಯಿಂದ ಹಣ ಪಡೆಯುತ್ತಿದ್ದನು.

2) ಆರೋಪಿತನು ಏನೂ ಅಡಚಣೆ ಇದೆ ಅಂತಾ ನನಗೆ ಹೇಳಿಲ್ಲಾ ಆದರೆ ಹಣ ಬೇಕಾಗಿದೆ ಅಂತಾ ಹೇಳಿರುತ್ತಾರೆ. ಆರೋಪಿತನು ಒಂದು ತಿಂಗಳ ನಂತರ ಹಾವೇರಿಯಲ್ಲಿ ಭೇಟಿ ಯಾದಾಗ ಹಣ ಕೊಡಲು ಕೇಳಿರುತ್ತೇನೆ. ಹಾವೇರಿಯಲ್ಲಿ ಎಷ್ಟು ಗಂಟೆಗೆ ಯಾವ ದಿನ ಭೇಟಿಯಾದ ಬಗ್ಗೆ ನೆನಪಿಲ್ಲ ಆದರೆ ಬಸ್ ಸ್ಟ್ಯಾಂಡ್ ಹತ್ತಿರ ಭೇಟಿಯಾಗಿರುತ್ತಾರೆ. ನಿಪಿ-1 ನ್ನು ಬ್ಯಾಂಕಿಗೆ ನಾನೇ ಸಲ್ಲಿಸಿರುತ್ತೇನೆ. ಸದರಿ ಶೀಪ್ಲನ್ನು ವಕೀಲರಿಗೆ ನೀಡಿರುತ್ತೇನೆ. ನಿಪಿ-1 ನ್ನು ಯಾವ ದಿನಾಂಕ ಬ್ಯಾಂಕಿಗೆ ಹಾಕಿದ್ದೇನೆ ನೆನಪಿಲ್ಲ. ಆರೋಪಿತನು ನನಗೆ ನಿಪಿ-1 ನ್ನು ಒಂದು ತಿಂಗಳ ನಂತರ ಹಾಕಲು ಹೇಳಿರುತ್ತಾರೆ.

3) ನಿಪಿ-1 ರ ನಂಬರ ನನಗೆ ನೆನಪಿಲ್ಲ. ನಿಪಿ-1 ಖಾತೆಯಲ್ಲಿ ಹಣ ಇಲ್ಲ ಎಂದು ಮರಳಿ ಬಂದಿರುತ್ತದೆ. ಅದೇ ರೀತಿ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಅದೆ ರೀತಿ ಹಣ ಇಲ್ಲ ಅಂತಾ ಬಂದಿದೆ ಎಂದು ನೋಟೀಸು ಆರೋಪಿತನಿಗೆ ನೀಡಿದ್ದೇನೆ. ನಿಪಿ-1 ಹಣ ಇಲ್ಲ ಬಂದ ಮೇಲೆ ಆರೋಪಿತನಿಗೆ ತಿಳಿಸಿರುವುದಿಲ್ಲ. ನಾನು ನನ್ನ ದುರಿನಲ್ಲಿ, ಸಾಕ್ಷಿ ಪ್ರಮಾಣ ಪತ್ರದಲ್ಲಿ ಮತ್ತು ನೋಟೀಸಿನಲ್ಲಿ ನಿಪಿ-1 ಬಂದ ಮೇಲೆ ಅದರಲ್ಲಿ ಹಣ ಇಲ್ಲ ಅಂತಾ ಆರೋಪಿತನಿಗೆ ತಿಳಿಸಿಲ್ಲ ಎಂದು ಬರೆದಿರುವುದಿಲ್ಲ. ನಿಪಿ-1 ನ್ನು ಬ್ಯಾಂಕಿಗೆ ಯಾವ ದಿನ ಹಾಕಿರುತ್ತೇನೆ ನೆನಪಿಲ್ಲ. ಆರೋಪಿತನು ನನಗೆ ದಿಃ 28-10-2022 ರಂದು ನೀಡಿರುತ್ತಾನೆ.

4) ನಾನು 2020 ರಲ್ಲಿ ಬೆಂಗಳೂರಿನಿಂದ ತಿಂಗಳಲ್ಲಿ 2 ಬಾರಿ ಬಟ್ಟೆ ಗಳನ್ನು ತಂದು ಮಾರಾಟ ಮಾಡುತ್ತಿದ್ದೆ. ನಾನು 2020 ರಲ್ಲಿ ಬ್ಯಾಡಗಿ ತಾಲೂಕಿನ ತಿಮಕಾಪುರ, ಮೋಟೆಬೆನ್ನೂರು ಮತ್ತು ವಾಲ್ಮಿಕಿ ಸಂಘ ಮತ್ತು ಬೆಟ್ಟದ ಮಲ್ಲೇಶ್ವರದಲ್ಲಿ ಬಟ್ಟೆಗಳನ್ನು ಮಾರಾಟ ಮಾಡಿದ್ದೇನೆ. ಆರೋಪಿತನನ್ನು ನಮ್ಮ ಅಣ್ಣ ನಮ್ಮ ಮನೆಗೆ ಬಂದು ಪರಿಚಯ ಮಾಡಿಸಿರುತ್ತಾನೆ. ನಮ್ಮ ಚಿಕ್ಕಪ್ಪ ಮಗ ಲಿಯಾಕತ್ ಪರಿಚಯ ಮಾಡಿಸಿರುತ್ತಾನೆ. ಆತನು ತನ್ನ ಗೆಳೆಯ ಅಂತಾ 5 -6 ವರ್ಷದ ಹಿಂದೆ ಪರಿಚಯ ಮಾಡಿಸಿರುತ್ತಾನೆ.

5) 2020 ರಲ್ಲಿ ಬಟ್ಟೆ ವ್ಯಾಪಾರದಿಂದ ಮತ್ತು ಕಿರಾಣಿ ಅಂಗಡಿಯಿಂದ ಒಂದು ತಿಂಗಳಿಗೆ ಒಟ್ಟು 30 ರಿಂದ 35 ಸಾವಿರ ಆದಾಯ ಬರುತ್ತಿತ್ತು. ನಮ್ಮ ಬೆಟ್ಟದಮಲ್ಲೇಶ್ವರ ಮನೆ ನಂಬರ 1145 ಇದೆ. ಸದರಿ ಮನೆ ಗುಡ್ಡಪ್ಪ ಆಡಿನವರ ಇವರ ಹೆಸರಿಗೆ ಇದೆ ಎಂದರೆ ಸರಿಯಲ್ಲ. ಆದರೆ ಸದರಿ ಮನೆ ಸಾವಿತ್ರಮ್ಮ ಗುಡ್ಡಪ್ಪ ಗೂರಮ್ಮನವರ ಇವರ ಹೆಸರಿಗೆ ಇತ್ತು. ಅದನ್ನು ನಾನು 99 ವರ್ಷ ಅಂತಾ ಖರೀದಿ ಸಂಚಕಾರ ಅಂತಾ ತೆಗೆದುಕೊಂಡಿರುತ್ತೇನೆ. ನನಗೆ ಸ್ವಂತ ಜಾಗ ಇಲ್ಲ, ಮನೆ ಇಲ್ಲ ಮತ್ತು ಅಂಗಡಿ ಇಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6) ನಾನು ಪುರಸಭೆಯಿಂದ ಅಂಗಡಿ ಹಾಕಲು ಪರವಾನಿಗೆ ಪಡೆದಿದ್ದೇನೆ. ಆದರೆ ಆ ದಾಖಲೆ ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ಯಾವುದೆ ತೊಂದರೆ ಇರುವುದಿಲ್ಲ. ನಾನು 2015 ರಿಂದ ಬಟ್ಟೆ ವ್ಯಾಪಾರ ಮಾಡುತ್ತಿದ್ದೇನೆ. ಸಿ.ಸಿ. ನಂಬರ 397/2016 ರಲ್ಲಿ ನಾನು ಕಿರಾಣಿ ಅಂಗಡಿ ವ್ಯಾಪಾರ ಅಂತಾ ಹೇಳಿರುತ್ತೇನೆ. ಸಿ.ಸಿ. ನಂಬರ 397/2016 ರಲ್ಲಿ ನನ್ನ ಸಾಕ್ಷಿಯಲ್ಲಿ ಉದ್ಯೋಗ ಕೂಲಿ ಅಂತಾ ಬರೆಸಿದಿದೆ ಅಂದರೆ ಸರಿ. ಆದರೆ ಸದರಿ ಪ್ರಕರಣ ನನ್ನದು ಅಲ್ಲ ಎಂದು ನುಡಿದಿರುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಬ್ಯಾಂಕಿಗೆ ಹಣ ಕಟ್ಟದೆ ಇರುವುದರಿಂದ ನಾನು ಬ್ಯಾಂಕಿಗೆ ಮೋಸ ಮಾಡಿದ್ದರಿಂದ ನನಗೆ ಶಿಕ್ಷೆ ಆಗಿದೆ ಎಂದರೆ ಸಾಕ್ಷಿಯು ನಾನು ಪಡೆದ ಹಣ ತುಂಬಿರುತ್ತೇನೆ ಎಂದು ನುಡಿಯುತ್ತಾರೆ.

7) ನಾನು ಬೀರೇಶ್ವರ ಬ್ಯಾಂಕಿನಲ್ಲಿ ಮತ್ತು ಬೇರೆ ಬೇರೆ ಬ್ಯಾಂಕಿನಲ್ಲಿ ಸಾಲ ಪಡೆದು ತುಂಬಿರುತ್ತೇವೆ. ಆದರೆ ಬೀರೇಶ್ವರ ಬ್ಯಾಂಕಿನಲ್ಲಿ ತೊಂದರೆಯಾಗಿರುತ್ತದೆ. ಸದರಿ ಸಾಲಗಳನ್ನು ವ್ಯಾಪಾರಕ್ಕೆ ಪಡೆದು ಮತ್ತೆ ಮರಳಿ ತುಂಬಿರುತ್ತೇನೆ. ನಾವು ತೆಗೆದಕೊಂಡ ಬ್ಯಾಂಕಿನ ಸಾಲದಿಂದ ನಮ್ಮ ಜೀವನ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು 2020 ರಲ್ಲಿ ಕರೊನಾ ಬಂದು ಲಾಕ್ ಡೌನ್ ಇತ್ತು ಎಂದರೆ ಸಾಕ್ಷಿಯು ಬೆಳಿಗ್ಗೆ ಓಡಾಡಲು ಅವಕಾಶ ಇತ್ತು ಎಂದು ನುಡಿದಿರುತ್ತಾರೆ . ಸದರಿ ಬೆಳಿಗ್ಗೆ ಕಿರಾಣಿ ಮತ್ತು ದವಾಖಾನೆ ಮಾತ್ರ ಅವಕಾಶ ಇತ್ತು ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ನಾನು ಸಮಾಜ ಸೇವೆ ಮತ್ತು ವ್ಯಾಪಾರ ಮಾಡುತ್ತೇನೆ ಅಂತಾ ಬರೆದಿದೆ ಅಂದರೆ ಸರಿ. ಆ ರೀತಿ ದೂರಿನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ಸಾದಿಕ್ ಕಾಗಿನೆಲೆ ನನಗೆ ಪರಿಚಯ. ಸದರಿ ಯವರ ತಂದೆ ಮೆಣಸಿನಕಾಯಿ ವ್ಯಾಪಾರ ಮಾಡುತ್ತಾರೆ. ಅವರು ಬ್ಯಾಡಗಿ ಗ್ರಾಮದವರು. ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಆದೇಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.